ಅಧ್ಯಕ್ಷರು : ನಾನು ಹೇಳುತ್ತಿದ್ದೇನೆ ದಯವಿಟ್ಟು ಕೇಳಿ ಪ್ರಶ್ನೋಕೋತ್ತರ ಮುಗಿದ ಮೇಲೆ ನಾನು ತಮಗೆ ಅವಕಾಶ ಮಾಡಿಕೊಡುತ್ತೇನೆ. ತಾವು ಈರೀತಿ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಮಂಡಲ್ ಕಮೀಷನ್ ನೇಮಕ ಆಯಿತು. ಅದರ ರಿಪೋರ್ಟ್ ಬಂತು ಇಂದಿರಾಗಾಂಧಿ ಪ್ರಧಾನಿಯಾಗಿದ್ದಾಗ ಅದು ಮೂಲೆ ಗುಂಪು ಆಯಿತು. ಆವಾಗ ಮಾನ್ಯ ಮುಖ್ಯಮಂತ್ರಿಗಳು ಏನು ಮಾಡುತ್ತಿದ್ದರು?

ಅಧ್ಯಕ್ಷರು : ದೇಶಪಾಂಡೆಯವರೇ ತಾವು ನನ್ನ ಮಾತನ್ನು ಕೇಳಬೇಕು.

ಶ್ರೀ ಆರ್. ವಿ. ದೇಶಪಾಂಡೆ : ಇಲ್ಲಿ ಸಾಮಾಜಿಕ ನ್ಯಾಯ ಹಿಂದುಳಿದ ವರ್ಗಕ್ಕೆ ನಾವು ಕೊಟ್ಟಿದ್ದಾದರೂ ಏನು?

ಅಧ್ಯಕ್ಷರು : ತಮ್ಮ ಪ್ರಸ್ತಾವನೆಗೆ ನಾನು ಅವಕಾಶ ಮಾಡಿಕೊಡುತ್ತೇನೆ..

ಶ್ರೀ ಆರ್. ವಿ. ದೇಶಪಾಂಡೆ : ಆ ಕೀರ್ತಿ ನಮ್ಮ ಪಕ್ಷಕ್ಕೆ ಬರಬೇಕಾಗಿದೆ. ಇವರು ಮತ್ತು ಬಿ.ಜೆ.ಪಿ.ಯವರು ಶಾಮೀಲಾಗಿ ....

(ಗೊಂದಲ)

ಅಧ್ಯಕ್ಷರು : ದೇಶಪಾಂಡೆಯವರೇ ನಾನು ತಮಗೆ ಅವಕಾಶ ಮಾಡಿಕೊಡುತ್ತೇನೆ. ಆಗ ತಾವು ಏನು ಹೇಳಬೇಕೋ ಅದನ್ನು ಹೇಳಿ. ವಿರೋಧ ಪಕ್ಷದ ನಾಯಕರೇ ನಾನು ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ನೋಡಿ ದೇಶಪಾಂಡೆಯವರೇ ನಾನು ಆತ್ಮೀಯತೆಯಿಂದ ಹೇಳುತ್ತಿದ್ದೇನೆ ತಾವು ಈ ರೀತಿ ಮಾಡುವುದು ಸರಿಯಲ್ಲ. ಇದನ್ನು ನಾನು ಒಪ್ಪುವುದಿಲ್ಲ. ತಾವು ಈ ರೀತಿ, ನನ್ನ ಮಾತಿಗೆ ....

(ಗೊಂದಲ)

ಅಧ್ಯಕ್ಷರು : ಕೇಳಿ ಸ್ವಾಮಿ ನಾನು ಅವಕಾಶ ಮಾಡಿಕೊಡುತ್ತೇನೆ. ತಮ್ಮದು ಏನುವಾದ ಇದೆ ಅದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ ಸ್ವಾಮಿ. ಪ್ರಶ್ನೋತ್ತರ ಮುಗಿಯಲಿ ನಾನು ಅವಕಾಶ ಮಾಡಿಕೊಡುತ್ತೇನೆ. ಸಂತೋಷದಿಂದ ತಾವು ನನಗೆ ಹೇಳಿ. ಆದರೆ ತಾವು ಹೀಗೆ ಕಲಾಪಕ್ಕೆ ಅಡ್ಡಿ ಮಾಡುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು : ಅದು ಏನೇ ಇರಲಿ ತಾವು ಪ್ರಶ್ನೋತ್ತರ ನಂತರ ಪ್ರಸ್ತಾವನೆ ಮಾಡಿ ಮಾನ್ಯ ವಿರೋಧಪಕ್ಷದ ನಾಯಕರು ನಾನು ಹೇಳುವುದನ್ನು ಅಮಾನ್ಯ ಮಾಡುವುದು ಸರಿಯಲ್ಲ ಇದು. ನಾನು ತಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ .....

(ಗೊಂದಲ)

ಅಧ್ಯಕ್ಷರು : ಈಗ ನಾನು ಪ್ರಶ್ನೋತ್ತರ ಪ್ರಾರಂಭಿಸುತ್ತಿದ್ದೇನೆ. ಪ್ರಶ್ನೋತ್ತರ ನಂತರ ತಮ್ಮದು ತೆಗೆದುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ.

ಅಧ್ಯಕ್ಷರು : ನಾನು ತಮಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇದಕ್ಕೆ ಒಂದು ಪರಿಹಾರ ಕಂಡು ಹಿಡಿಯೋಣ ಅಂತ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ತಮ್ಮ ಪಾರ್ಟಿಯವರು 7 ದಿವಸ ಸದನದ ಕಾರ್ಯಕಲಾಪಗಳನ್ನು ಹಾಳು ಮಾಡಿದರು ಅದರ ಬಗ್ಗೆ ತಾವು ಏನು ಮಾಡಿದಿರಿ? ದಯಮಾಡಿ ತಪ್ಪು ತಿಳಿದುಕೊಳ್ಳಬಾರದು . ನಮ್ಮ ಬೇಡಿಕೆಗಳು ಎಲ್ಲಿಯವರೆಗೂ ಈಡೇರಿಸುವುದಿಲ್ಲ ಅಲ್ಲಿಯವರೆಗೂ ನಮ್ಮ ಗಲಾಟೆ ನಡೆಯುತ್ತದೆ. ನಮ್ಮ ಮನಸ್ಸಿನಲ್ಲಿ ಕಲಾಪ ಅಡ್ಡಿಮಾಡಬೇಕೆನ್ನುವ ಇಚ್ಛೆ ಇಲ್ಲ. ಚರ್ಚೆ ಮಾಡಲಿಕ್ಕೆ ಹಲವಾರು ವಿಷಯಗಳು ಇವೆ. ಆದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಪುನಃ ನಾನು ವಿನಂತಿ ಮಾಡುತ್ತಿದ್ದೇನೆ. ಅವರು ನಮ್ಮ ಎರಡು ಬೇಡಿಕೆಗಳನ್ನು ಒಪ್ಪಿಕೊಳ್ಳಲಿ. ಆದರೆ ತಾವು ನಮ್ಮ ಇಲ್ಲದಿರುವಿಕೆಯಲ್ಲಿ ಈ ರೀತಿಯ ಆಪಾದನೆಗಳು ಮಾಡುವುದು ಸರಿಯಲ್ಲ.

ಅಧ್ಯಕ್ಷರು : ಅದಕ್ಕೆ ನಾನು ತಮಗೆ ಆಸ್ಪದ ಮಾಡಿಕೊಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು) : ಸದನಸಮಿತಿಯನ್ನು ಮಾಡಲಿಕ್ಕೆ ನಾನು ಈಗಾಗಲೇ ಒಪ್ಪಿಕೊಂಡಿದ್ದೇನೆ. ತಾವು ಏನಾದರೂ ಪರಿಹಾರ ಕಂಡುಹಿಡಿಯುವುದಿದ್ದರೆ ತಮ್ಮ ಛೇಂಬರ್ಸ್‌ಗೆ ಕರೆಸಿ ತಾವು ಮಾತನಾಡಿ ಆದರೆ ಪ್ರಶ್ನೋತ್ತರ ವೇಳೆಯಲ್ಲಿ ತಾವು ದಿನ ಈ ರೀತಿ ಮಾಡುವುದು ಸರಿಯಲ್ಲ .

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಈ ಸದನಕ್ಕೆ ಒಂದು ಮಹತ್ತರವಾದ ಗೌರವ ಇದೆ. ನಿನ್ನೆಯ ದಿವಸ ನಾನು ಮಾತನಾಡುವಾಗ ಈ ಸದನವನ್ನು ತಪ್ಪುದಾರಿಗೆ ಎಳೆಯಬೇಕು ಅಂತ ಆಗಲಿ ಅಥವಾ ಈ ಸದನವನ್ನು ದುರುಪಯೋಗ ಮಾಡಿಕೊಳ್ಳಬೇಕು ಅಂತ ಆಗಲೀ ಎದ್ದು ನಿಂತವನಲ್ಲ, ತಮ್ಮಲ್ಲಿ ಮನವಿ ಮಾಡಿಕೊಂಡು ದಯವಿಟ್ಟು ನನಗೆ ಒಂದು ಅವಕಾಶ ಕೊಡಬೇಕು ಅಂತ ಹೇಳಿ. ಆಗ ವಿನಾ ಕಾರಣ ಕರುಣೆ ಇಲ್ಲದೆ ನನ್ನನ್ನು ಇಲ್ಲಿಂದ ಎತ್ತಿ ಹೊರಗೆ ಹಾಕಿಸಿದಿರಿ. ನಾವು ಏನು ಮಾಡಿದ್ದೆವು ಸ್ವಲ್ಪ ಹೇಳಿ. ನಾನು ಏನೂದರೂ ಈ ಸದನದಲ್ಲಿ ತಪ್ಪು ಮಾಡಿದ್ದೇನೆಯೇ ಎಲ್ಲರಿಗೂ ಒಂದು ಮಂತ್ರ ಮಾಡಿದಿರಿ. ಈಗ ಈ ಸದನ ನಡೆಯಬೇಕು ಎನ್ನತಕ್ಕಂಥಾದ್ದು ನಮ್ಮ ಇಚ್ಛೆ. ಆದರೆ ನಿಮ್ಮಿಬ್ಬರ ಗೊಂದಲ ನೋಡಿ ಒಂದು ಕಡೆ ಕಾಂಗ್ರೇಸ್ಸಿನವರು ಒಂದು ಕಡೆ ಜನತಾದಳದವರು ನಮ್ಮ ಮೇಲೆ ಅವರು ನಿಮ್ಮ ಆಮೇಲೆ ಅವರು ಆರೋಪಣೆ ಮಾಡುತ್ತಿದ್ದೀರಿ. ಈ ಸದನದಲ್ಲಿ ನಾವು ಕುಳಿತುಕೊಳ್ಳಬೇಕೇ ಅಥವಾ ಬಿಡಬೇಕೇ ಎನ್ನತಕ್ಕಂಥ ಅತ್ಯಂತ ಶೋಚನೀಯವಾದ ಪರಿಸ್ಥಿತಿ ಉಂಟಾಗಿದೆ ಈ ರಾಜ್ಯದ ಜನತೆ ಈ ಸದನದ ಪರಿಸ್ಥಿತಿಯನ್ನು ನೋಡುತ್ತಿದ್ದಾರೆ.

ಅಧ್ಯಕ್ಷರು : ನಾನು ಪ್ರಶ್ನೋತ್ತರ ಶುರು ಮಾಡುತ್ತಿದ್ದೇನೆ. ಆಮೇಲೆ ನಾನು ತಮಗೆ ಅವಕಾಶ ಕೊಡುತ್ತಿದ್ದೇನೆ. ಆದರೆ ಈ ರೀತಿ ನಾವು ಯಾವಾಗಲೂ ನಡೆಸಿಕೊಂಡು ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾಪಂಚಾಯತ್ ಚುನಾವಣೆಗಳನ್ನು ಮುಂದೆ ಹಾಕಿ ಈ ಸದನವನ್ನು ತಪ್ಪುದಾರಿಗೆ ಎಳೆದಿದ್ದಾರೆ. ಈ